



# ಕಾಮನಬಿಲ್ಲಿನ ಗುಲಾಬಿ

ಬಣ್ಣ ಬಣ್ಣದ ದಳಗಳಿಂದ ಕಂಗೊಳಿಸುತ್ತಿರುವ ಈ ಗುಲಾಬಿ ಹೂಗಳನ್ನು ನೋಡಿದ ಕೂಡಲೇ ಪ್ಲಾಸ್ಟಿಕ್ ಅಥವಾ ಪೇಪರ್‌ನಿಂದ ತಯಾರಾದ ಹೂಗಳಿರಬಹುದೇನೋ ಎಂದೆನಿಸುತ್ತದೆ. ಆದರೆ ಇವು ಕೃತಕ ಹೂಗಳಲ್ಲ, ಗಿಡಗಳಲ್ಲಿ ಬೆಳೆದಿರುವ ನೈಜ ಗುಲಾಬಿಗಳು.

ಹುಟ್ಟುಹಬ್ಬ, ಮದುವೆ ಮುಂತಾದ ಶುಭ ಸಂದರ್ಭಗಳಲ್ಲಿ ಯಾರಿಗಾದರೂ ಉಡುಗೊರೆ ಕೊಡಲು ಈ ಗುಲಾಬಿಗಳು ಅತ್ಯಂತ ಸೂಕ್ತವಾಗಿವೆ. 'ಸಂತೋಷದ ಹೂಗಳು' (ಹ್ಯಾಪಿ ಫ್ಲವರ್ಸ್) ಎಂದು ಕರೆಯುವ ಈ ಬಹು ವರ್ಣ ದಳಗಳಿರುವ ಕಾಮನಬಿಲ್ಲಿನ ಗುಲಾಬಿ ತಳಿಯನ್ನು ಮೊಟ್ಟ ಮೊದಲಿಗೆ ಬೆಳೆದಿದ್ದು ಪೀಟರ್ ವ್ಯಾನ್ ಡೇ ವೆರ್ಕನ್. 42 ವರ್ಷ ವಯಸ್ಸಿನ ಈತ ದಕ್ಷಿಣ ಹಾಲೆಂಡ್‌ನಲ್ಲಿರುವ ಪುಷ್ಪ ಕಂಪನಿಯೊಂದರ ಮಾಲಿಕ.

ಹೂಗಳಿಗೆ ಬಣ್ಣ ನೀಡುವುದು ಈತನ ಅಚ್ಚುಮೆಚ್ಚಿನ ಹವ್ಯಾಸ. ಫ್ಲವರ್ ಎಂಜಿನಿಯರಿಂಗ್ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಅನೇಕ ಬಣ್ಣಗಳ ದಳಗಳಿರುವ ಗುಲಾಬಿಯನ್ನು ಬೆಳೆದಿದ್ದಾನೆ. ಗುಲಾಬಿ ಹೂ ಬಿಡುತ್ತಿರುವ ಸಮಯದಲ್ಲಿ ಅದರ ಕಾಂಡಕ್ಕೆ, ಸಸ್ಯಜನ್ಯವಾದ ಸ್ವಾಭಾವಿಕ ಬಣ್ಣಗಳನ್ನು (ನ್ಯಾಚುರಲ್ ಡೈ) ಇಂಜೆಕ್ಟ್ ಮಾಡಿದಾಗ ದಳಗಳು ಅದನ್ನು ಹೀರಿಕೊಂಡಿವೆ.

'ಈ ಕೆಲಸ ಅತ್ಯಂತ ಕಷ್ಟಕರ. ನಾವು ಮೊದಲಿಗೆ ಒಂದೇ ಬಣ್ಣದ ಹೂಗಳನ್ನು ಮಾರುತ್ತಿದ್ದೆವು. ಆದರೆ ಅದರ ಬೇಡಿಕೆ ಕುಸಿದು ವ್ಯಾಪಾರ ಕಡಿಮೆಯಾಯಿತು. ಆಗ ನಾನು ಹಾಗೂ ನನ್ನ ಸಹದ್ಯೋಗಿಗಳು ವಿಭಿನ್ನವಾಗಿ ಮಾಡಬೇಕೆಂದು ಯೋಚಿಸಿ ಬೇರೆ ಬೇರೆ ಬಣ್ಣಗಳ ಗುಲಾಬಿಯನ್ನು ಬೆಳೆಯಲು ಆರಂಭಿಸಿದೆವು. ಬಣ್ಣಕ್ಕಾಗಿ ಡೈ ಅನ್ನು ಇಂಜೆಕ್ಟ್ ಮಾಡಲು ಆರಂಭಿಸಿದೆವು. ಇದು ಪರಿಪೂರ್ಣವಾಗಲು ಸುಮಾರು ಆರು ತಿಂಗಳು ಬೇಕಾಯಿತು' ಎಂದು ಪೀಟರ್ ವ್ಯಾನ್ ಡೇ ಹೇಳುತ್ತಾನೆ.

ಕಾಮನಬಿಲ್ಲಿನ ವರ್ಣಗಳನ್ನೆಲ್ಲಾ ಮೇಳೈಸಿಕೊಂಡು ಅತ್ಯಂತ ಸುಂದರವಾಗಿ ಕಾಣುವ ಗುಲಾಬಿಗಳು ಇಡೀ ವಿಶ್ವದಾದ್ಯಂತ ಕೆಲವೇ ಕೆಲವು ಅಂಗಡಿಗಳಲ್ಲಿ ಮಾತ್ರ ಲಭ್ಯ.

■ ವಿದ್ಯಾ ಹಾಲಭಾವಿ

